ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಶುಕ್ರವಾರ, ದಿನಾಂಕ: 08ನೇ ಸೆಪ್ಟೆಂಬರ್, 2023

ಸಂಖ್ಯೆ: 42

ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ **ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2023ನ್ನು** ಕರ್ನಾಟಕ ವಿಧಾನ ಪರಿಷತ್ತಿನ 150ನೇ ಅಧಿವೇಶನದಲ್ಲಿ ದಿನಾಂಕ:18.07.2023ರಂದು ಪರ್ಯಾಲೋಚನೆ ಹಾಗೂ ಅಂಗೀಕಾರಕ್ಕಾಗಿ ಮಂಡಿಸಲ್ಪಟ್ಟ ಸಂದರ್ಭದಲ್ಲಿ ಅನೇಕ ಶಾಸಕರುಗಳ ಕೋರಿಕೆ ಮೇರೆಗೆ ಸದರಿ ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 116ರ ರೀತ್ಯಾ ಮಾನ್ಯ ಸಭಾಪತಿಯವರು ಪರಿಶೀಲನಾ ಸಮಿತಿಗೆ ವಹಿಸಿರುತ್ತಾರೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 229ರ ಅನ್ವಯ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಮೂರು ತಿಂಗಳೊಳಗಾಗಿ ಸದನಕ್ಕೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.

ಶ್ರೀಯುರತುಗಳಾದ

1.	ಶಿವಾನಂದ ಎಸ್ ಪಾಟೀಲ್	ಅಧ್ಯಕ್ಷರು ಹಾಗೂ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು
2.	ಹೆಚ್.ಕೆ. ಪಾಟೀಲ	ಸದಸ್ಯರು ಹಾಗೂ ಮಾನ್ಯ ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು
3.	ಎಸ್. ರವಿ	ಸದಸ್ಯರು
4.	ಪ್ರಕಾಶ್ ಕೆ. ರಾಥೋಡ್	ಸದಸ್ಯರು
5.	ಕೆ.ಎ. ತಿಪ್ಪೇಸ್ವಾಮಿ	ಸದಸ್ಯರು
6.	ಡಿ.ಎಸ್. ಅರುಣ್	ಸದಸ್ಯರು
7.	ಎಂ.ಎಲ್. ಅನಿಲ್ ಕುಮಾರ್	ಸದಸ್ಯರು
8.	ಕೇಶವ ಪ್ರಸಾದ್ ಎಸ್.	ಸದಸ್ಯರು
9.	ಹೇಮಲತಾ ನಾಯಕ್	ಸದಸ್ಯರು

ಕೆ.ಆರ್. ಮಹಾಲಕ್ಷ್ಮಿ,
ಕಾರ್ಯದರ್ಶಿ.

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳ ಮಾಹಿತಿಗಾಗಿ.